ಗಡ್ಡೆಯ ಕುರುಹುಗಳನ್ನು ಪತ್ತೆ ಹಚ್ಚುವ ಅತ್ಯಂತ ಸೂಕ್ಷ್ಮ ವಿಧಾನ. ಈ ಶಕ್ತಿಶಾಲಿ ಉಪಕರಣ ಗಡ್ಡೆಯ ಇರುವಿಕೆ, ಕ್ಯಾನ್ಸರ್ ಮತ್ತೆ ಕಾಣಿಸಿಕೊಳ್ಳುವುದು, ಚಿಕಿತ್ಸೆಗೆ ಪ್ರತಿಕ್ರಿಯೆ ಮುಂತಾದ ವಿಷಯಗಳಲ್ಲಿ ವೈದ್ಯಕೀಯ ಲೋಕದಲ್ಲಿ ಬಳಕೆಯಾಗುವ ಯಾವುದೇ ಕ್ರಮಕ್ಕಿಂತ ಹೆಚ್ಚು ಶೀಘ್ರ ಮತ್ತು ನಿಖರ ಸೂಚನೆ ನೀಡಬಲ್ಲದು ಎಂಬುದು ತಜ್ಞರ ಅನಿಸಿಕೆ.

ವೈದ್ಯಕೀಯ ಸಂಶೋಧನೆಯ ಭಾರತೀಯ ಮಂಡಳಿ (ಇಂಡಿಯನ್ ಕೌನ್ಸಿಲ್ ಫಾರ್ ಮೆಡಿಕಲ್ ರಿಸರ್ಚ್– ಐಸಿಎಂಆರ್) ನೀಡಿರುವ ವಿವರಗಳ ಪ್ರಕಾರ 2020ರ ವೇಳೆಗೆ ಭಾರತದಲ್ಲಿ 17.3 ಲಕ್ಷ ನೂತನ ಕ್ಯಾನ್ಸರ್ ಪ್ರಕರಣಗಳು ಕಾಣಿಸಿಕೊಳ್ಳಬಹುದು ಎಂದು ಅಂದಾಜು ಮಾಡಲಾಗಿದೆ.

'ಸ್ಟ್ರಾಂಡ್ ಲಿಕ್ವಿಡ್ ಬಯಾಪ್ಸಿ' ತಂತ್ರಜ್ಞಾನ ಬಳಸಿ ಒಂದು ವಿಸ್ತೃತ ಅಧ್ಯಯನ ಕೈಗೊಳ್ಳಲಾಯಿತು. ಶ್ವಾಸಕೋಶ, ಕರುಳು, ಗುದನಾಳ, ಸ್ತನ ಮತ್ತು ಮೂತ್ರಕೋಶ ಮುಂತಾದ ಕ್ಯಾನ್ಸರ್ ಹೊಂದಿರುವ ರೋಗಿಗಳಲ್ಲಿ ಈ ಅಧ್ಯಯನವನ್ನು ನಡೆಸಲಾಗಿದ್ದು ಇದರಲ್ಲಿ ಶೇ.35ರಷ್ಟು ರೋಗಿಗಳಲ್ಲಿ ಕ್ಯಾನ್ಸರ್‌ನ ಆರಂಭದ ಹಂತದಲ್ಲಿಯೇ ತೊಂದರೆ ಇರುವುದು ಪತ್ತೆಯಾಯಿತು' ಎಂದು ಹೇಳುತ್ತಾರೆ ಸ್ಟ್ರಾಂಡ್ ಲೈಫ್ ಸೈನ್ಸಸ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ವಿಜಯ ಚಂದ್ರು.

'ಈ ಹೊಸ ವೈದ್ಯಕೀಯ ತಂತ್ರಜ್ಞಾನ ಸೋಂಕು ರಹಿತ ರೋಗಗಳನ್ನು ಕಡಿಮೆ ಮಾಡುವಲ್ಲಿ ಸಹಾಯವಾಗಬಹುದಾಗಿದೆ. ಕ್ಯಾನ್ಸರ್ ಚಿಕಿತ್ಸೆಯಲ್ಲಿ ಈ ಅತ್ಯಾಧುನಿಕ ತಂತ್ರಜ್ಞಾನ ಪ್ರಮುಖ ಪಾತ್ರ ವಹಿಸುತ್ತಿದೆ' ಎಂದು ಹೇಳುತ್ತಾರೆ ಬಯೋಕಾನ್‌ನ ಅಧ್ಯಕ್ಷೆ ಕಿರಣ್ ಮಜುಂದಾರ್.

'ಇಲ್ಲಿಯವರೆಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಾತ್ರ ಲಭ್ಯವಿದ್ದ ಈ ದುಬಾರಿ ತಂತ್ರಜ್ಞಾನವನ್ನು ಇದೇ ಮೊದಲ ಬಾರಿಗೆ ಭಾರತ ದಲ್ಲಿಯೇ ಅಭಿವೃದ್ಧಿಪಡಿಸಲಾಗಿದೆ ಎಂದೂ ಹೇಳುತ್ತಾರೆ ಅವರು.

### ಈಗ ಚಿಕಿತ್ಸೆ ಸರಳ

ದೇಹದ ಒಳಗೆ ಬೆಳೆಯುತ್ತಿರುವ ಸೂಕ್ಷ್ಮ ಗಡ್ಡೆಗಳನ್ನು ಗುರುತಿಸುವುದು ಕೆಲವೊಮ್ಮೆ ಬಹಳ ಕಷ್ಟವಾಗುತ್ತದೆ. ಹೀಗಾಗಿ ಕ್ಯಾನ್ಸರ್ ಪತ್ತೆಗೆ ಅಂಗಾಂಶ ಮಾದರಿ ಪಡೆದುಕೊಳ್ಳಲು ಸಣ್ಣ ಶಸ್ತ್ರಚಿಕಿತ್ಸೆಯ ಅಗತ್ಯವಿರುತ್ತದೆ. ಅಲ್ಲದೆ ಗಡ್ಡೆ ದೇಹದ ಒಳಗೆ ಆಳದಲ್ಲಿ ಹುದುಗಿರುವಂತಹ ಸಂದರ್ಭಗಳಲ್ಲಿ ಇದು ಮತ್ತಷ್ಟು ಸವಾಲಿನ ವಿಷಯ. ಆದರೆ ದ್ರವ ಅಂಗಾಂಶ ಪರೀಕ್ಷೆಯಲ್ಲಿ ಅತ್ಯಂತ ಸರಳವಾಗಿ ಸ್ವಲ್ಪ ರಕ್ತ ಪಡೆದುಕೊಳ್ಳುವ ಅಗತ್ಯ ಮಾತ್ರ ಇರುತ್ತದೆ. ಇದರಿಂದ ಚಿಕಿತ್ಸೆಯೂ ಸವಾಲಿನದು ಎನಿಸುವುದಿಲ್ಲ' ಎಂದು ಹೇಳುತ್ತಾರೆ ಮಜುಂದಾರ್ ಷಾ ಮೆಡಿಕಲ್ ಸೆಂಟರ್‌ನ ವೈದ್ಯಕೀಯ ನಿರ್ದೇಶಕ ಡಾ. ಶರತ್ ದಾಮೋದರ್.

'ಕ್ಯಾನ್ಸರ್ ಚಿಕಿತ್ಸೆ ಪಡೆದ ರೋಗಿಗೆ ಕ್ಯಾನ್ಸರ್ ಮತ್ತೆ ಕಾಣಿಸಿಕೊಳ್ಳಬಲ್ಲದೆ ಎಂಬುದನ್ನೂ ಸಹ ಈ 'ಲಿಕ್ವಿಡ್ ಬಯಾಪ್ಸಿ' ಸಹಕರಿಸಬಲ್ಲದು. ಮೆದುಳು, ಶ್ವಾಸಕೋಶ, ಮೂತ್ರಕೋಶದಂತಹ ಅಂಗಾಂಗಳಲ್ಲಿ ಬೆಳೆಯುವ ಗಡ್ಡೆ ಮಾದರಿಯನ್ನು ಪರೀಕ್ಷೆಗಾಗಿ ಹೊರ ತೆಗೆಯುವುದು ಕಷ್ಟ. ಸರಳ ದ್ರವ ಅಂಗಾಂಶ ಪರೀಕ್ಷೆ ಈ ಎಲ್ಲ ಸಮಸ್ಯೆಗೆ ಪರಿಹಾರವಾಗಲಿದೆ' ಎಂದೂ ಹೇಳುತ್ತಾರೆ ಅವರು.

'ಶಸ್ತ್ರಚಿಕಿತ್ಸೆಯಿಂದ ಕ್ಯಾನ್ಸರ್ ಗಡ್ಡೆ ಹೊರತೆಗೆದ ನಂತರ ಮತ್ತೆ ಕ್ಯಾನ್ಸರ್ ಕಾರಕ ಜೀವಕೋಶಗಳು ಬೆಳೆಯುವುದನ್ನು ಪತ್ತೆ ಮಾಡಬಹುದು. ಅಲ್ಲದೆ ದ್ರವ ಅಂಗಾಂಶ ಮಾದರಿ ಪರೀಕ್ಷೆಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕನಿಷ್ಠ 2 ಲಕ್ಷ ರೂಪಾಯಿ ವೆಚ್ಚ ತಗುಲುತ್ತದೆ. ಆದರೆ ಇಲ್ಲಿ ಕೇವಲ 20 ಸಾವಿರ ರೂಪಾಯಿ ಖರ್ಚಾಗುತ್ತದೆ' ಎನ್ನುತ್ತಾರೆ ಸ್ಟ್ರಾಂಡ್ ಲೈಫ್ ಸೈನ್ಸಸ್‌ನ ಕಾರ್ಯನಿರ್ವಾಹಕ ಅಧಿಕಾರಿ ಡಾ. ರಮೇಶ್ ಹರಿಹರನ್. ■




## ಮಹಿಳೆಯ ಸೌಂದರ್ಯವರ್ಧನೆಗೆ ಕಾಸ್ಮೆಟಿಕ್ ಸರ್ಜರಿ



ಮಹಿಳೆಯರು, ಯಾವುದೇ ಅಂಗ ಸ್ವಲ್ಪ ಏರುಪೇರಾಗಿದ್ದರೂ ಅದರಲ್ಲೂ ಸ್ತನಗಳ ವಿಷಯ ಬಂದಾಗ ಬಹಳ ಮುಜುಗರಕ್ಕೆ ಒಳಗಾಗಿ ಮಾನಸಿಕ ವಾಗಿ ಕುಗ್ಗಿಹೋಗುತ್ತಾರೆ. ಸ್ನೇಹಿತರ ಜೊತೆಯಲ್ಲಿ ಅಥವಾ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವಲ್ಲಿ ಹಿಂಜರಿಯುತ್ತಾರೆ. ಸರಿಯಾದ ಉಡುಪುಗಳನ್ನು ಧರಿಸಲು ಆಗದೆ ಹೋದಾಗ ತುಂಬಾ ವ್ಯಥೆಪಡುತ್ತಾರೆ.

ಈ ನಿಟ್ಟಿನಲ್ಲಿ ಸೌಂದರ್ಯವರ್ಧನ ಸ್ತನ ಶಸ್ತ್ರಚಿಕಿತ್ಸೆಗಳ ಮೂಲಕ ಸರಿಯಾದ ಪರಿಹಾರ ಕಂಡುಕೊಳ್ಳಬಹುದು. ಈ ಶಸ್ತ್ರಚಿಕಿತ್ಸೆಗಳು ಸುರಕ್ಷಿತವಾಗಿದ್ದು, ಬಹುತೇಕ ಒಂದು ದಿನದಲ್ಲೇ ಹಿಂತಿರುಗಬಹುದು. ಹಾಲುಣಿಸುವುದಕ್ಕೆ ಯಾವುದೇ ತೊಂದರೆಗಳು ಇರುವುದಿಲ್ಲ ಹಾಗೂ ಸ್ತನದ ಕ್ಯಾನ್ಸರ್ ಬರುವ ಸಾಧ್ಯತೆ ಇರುವುದಿಲ್ಲ. 18 ವಯಸ್ಸಿನ ನಂತರ ಯಾವುದೇ ಮಹಿಳೆ ಈ ಶಸ್ತ್ರಚಿಕಿತ್ಸೆಗೆ ಒಳಗಾಗಬಹುದು.

**Breast Augmentation (ಸ್ತನಗಳ ಗಾತ್ರ ಹೆಚ್ಚಿಸುವುದು ) :** ಯಾವುದೇ ಮಹಿಳೆ 18 ರ ನಂತರ ಅಥವಾ ಹೆರಿಗೆಯ ನಂತರ ತಮ್ಮ ಸ್ತನಗಳ ಗಾತ್ರ ಹೆಚ್ಚಿಸಲು ಇಚ್ಛಿಸಿದರೆ Silicon Implants ಸರ್ಜರಿ ಮೂಲಕ ಪರಿಹಾರ ಕಂಡುಕೊಳ್ಳಬಹುದು, ನಂತರ ಜೀವನಪರ್ಯಂತ ಗಾತ್ರದಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಸ್ತನಗಳ ಗಾತ್ರವನ್ನು ದೇಹಕ್ಕೆ ಹೊಂದಾಣಿಕೆಯಾಗುವಂತೆ ಮಾಡಲಾಗುವುದು.

**Breast Reduction (ಸ್ತನಗಳ ಗಾತ್ರ ಕಡಿಮೆ ಮಾಡುವುದು) :** ದೊಡ್ಡ ಸ್ತನಗಳಿಂದ ಎದೆ ನೋವು, ಕುತ್ತಿಗೆ ನೋವು, ಬೆನ್ನುನೋವು, ಮತ್ತು ಖಿನ್ನತೆಗೆ ಒಳಗಾಗುತ್ತಾರೆ. ಸ್ತನಗಳ ಗಾತ್ರವನ್ನು ದೇಹಕ್ಕೆ ಸರಿಯಾಗಿ ಹೊಂದಾಣಿಕೆ ಯಾಗುವಂತೆ ಮಾಡಲಾಗುತ್ತದೆ. ಸರ್ಜರಿಯ ನಂತರ ಗಾತ್ರ ಹೆಚ್ಚಾಗುವ ಸಾಧ್ಯತೆಗಳು ಇರುವುದಿಲ್ಲ ಮತ್ತು ವಯೋಮಾನ ಕ್ಕನುಗುಣವಾಗಿ ಆಗುವ ಬದಲಾವಣೆಗಳು ಸಾಮಾನ್ಯ.

**ಇನ್ನಿತರೆ ಸೇವೆಗಳು :** ಹೇರ್ ಟ್ರಾನ್ಸ್‌ಪ್ಲಾಂಟೇಷನ್, ಬೊಜ್ಜುತನಕ್ಕೆ ಸರ್ಜರಿ, ಮೂಗಿನ ವಿಕಾರತೆ ಸರಿಪಡಿಸುವುದು, ಕೆನ್ನೆಗುಳಿ, ಮುಖದ ಕಾಸ್ಮೆಟಿಕ್ ಸರ್ಜರಿಗಳು, ಪುರುಷರ ಎದೆಯ ಸರ್ಜರಿ ಇತ್ಯಾದಿ...

**ಡಾ : ಗಿರೀಶ್ ಎ. ಸಿ., ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್, ಕರ್ಲ್ಸ್ ಮತ್ತು ಕರ್ವ್ಸ್ ಹೇರ್ ಟ್ರಾನ್ಸ್‌ಪ್ಲಾಂಟೇಷನ್ ಮತ್ತು ಕಾಸ್ಮೆಟಿಕ್ ಸರ್ಜರಿ ಸೆಂಟರ್, ರಾಜಾಜಿನಗರ, ಬೆಂಗಳೂರು. www.curlsncurves.com**

**8088400400 9448571216**

"ಭಾರತ್ ಜ್ಯೋತಿ" ಮತ್ತು "ಅತ್ಯಂತ ಭರವಸೆಯ ಕಾಸ್ಮೆಟಿಕ್ ಸರ್ಜರಿ ಸೆಂಟರ್" ಈ ಪ್ರಶಸ್ತಿಗಳಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪ್ರಶಸ್ತಿ ವಿಜೇತರು

**ಹೆಚ್ಚಿನ ಮಾಹಿತಿಗಾಗಿ ಪ್ರತೀ ಗುರುವಾರ ಮಧ್ಯಾಹ್ನ 1.30ಕ್ಕೆ ಪಬ್ಲಿಕ್ ನ್ಯೂಸ್ ಚಾನಲ್ ವೀಕ್ಷಿಸಿ**